<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ದಕ್ಷಿಣ ಕನ್ನಡ, ಮಂಗಳೂರು</u>

<u>**ಸ್ಪೆಷಲ್ ಕೇಸ್ ನಂಬ್ರ: 11/2022**</u>

ಸರಕಾರದ ಪರವಾಗಿ,
ಮಂಗಳೂರು ಪೂರ್ವ ಪೊಲೀಸು ಠಾಣೆ - ಪಿರ್ಯಾದುದಾರ

ಮತ್ತು

ಮೊಹಮ್ಮದ್ ಅಜಿನಾಸ್ ಮತ್ತು ಇನ್ನೊಬ್ಬ - ಆರೋಪಿಗಳು

<u>ದೋಷಾರೋಪಣೆ</u>

ನಾನು ಬಸವರಾಜ, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ದ.ಕ., ಮಂಗಳೂರು ಆದ ನಾನು ಈ ಪ್ರಕರಣದಲ್ಲಿ ಆರೋಪಿಯಾದ ನಿಮ್ಮನ್ನು -

1. ಮೊಹಮ್ಮದ್ ಅಜಿನಾಸ್ ವಿ.ಎಸ್.
   ತಂದೆ: ಅಜೀಮ್
   ಪ್ರಾಯ 25 ವರ್ಷ,
   ವಾಸ: ವಡಕ್ಕೆ ಮುಳ್ಳಂಗೊತ್ತು ಹೌಸ್,
   ಮುಟ್ಟಂಗಲ್ ವೆಸ್ಟ್ ಪೋಸ್ಟ್,
   ವಡಕರ, ಕ್ಯಾಲಿಕಟ್ ಜಿಲ್ಲೆ,
   ಕೇರಳ ರಾಜ್ಯ.

2. ಉಮೇಶ್ ಪ್ರೀತಮ್ ಪ್ರಕಾಶ್
   ತಂದೆ: ಪ್ರಕಾಶ್,
   ಪ್ರಾಯ 22 ವರ್ಷ,
   ವಾಸ: ಪ್ಲೋಟ್ ನಂ.10,
   ಪದ್ಮ ನಿಲಯ, ಲಕ್ಷ್ಮೀ ನಗರ,
   ತೋಳನಕೆರೆ,
   ಹುಬ್ಬಳ್ಳಿ ತಾಲೂಕು ಮತ್ತು ಜಿಲ್ಲೆ.
   } **Split up**

ಈ ಕೆಳಕಂಡಂತೆ ದೋಷಾರೋಪಣೆಗೆ ಒಳಪಡಿಸುತ್ತಿದ್ದೇನೆ.

1 ನೇ ಆರೋಪಿಯಾದ ನೀವು ಈ ಪ್ರಕರಣದಿಂದ ಬೇರ್ಪಡಿಸಿರುವ 2 ನೇ ಆರೋಪಿ ಜೊತೆ ಕೂಡಿ ಅಪರಾಧವನ್ನೆಸಗುವ ಸಮಾನ ಉದ್ದೇಶದಿಂದ ರೂ.16,80,000/- ಮೌಲ್ಯದ ಒಟ್ಟು 15 ಗ್ರಾಂ ಮತ್ತು 15 ಮಿಲಿಗ್ರಾಂ ತೂಕದ ಮಾದಕವಸ್ತು ಆಗಿರುವ 840 LSD ಸ್ಟಾಂಪ್‌ಗಳನ್ನು ಅಕ್ರಮವಾಗಿ ಸಾರ್ವಜನಿಕರು ಮತ್ತು ವಿದ್ಯಾರ್ಥಿಗಳಿಗೆ ಮಾರಾಟ

ಮಾಡುವ ಉದ್ದೇಶದಿಂದ KL-18F-3859 ನೇ ಮೋಟಾರು ಸೈಕಲ್ ನಲ್ಲಿ ದಿನಾಂಕಃ 10.06.2021 ರಂದು ಮಂಗಳೂರು ಪೂರ್ವ ಪೋಲಿಸ್ ಠಾಣಾ ವ್ಯಾಪ್ತಿಯ ಕದ್ರಿ ಮಲ್ಲಿಕಟ್ಟೆ ತೇಜಸ್ವಿನಿ ಆಸ್ಪತ್ರೆಯ ಬಳಿಗೆ ಬಂದು ಗ್ರಾಹಕರಿಗೆ ಕಾಯುತ್ತಿದ್ದ ಸಮಯ ಚಾಸಾ-2 ಶ್ರೀ ಮಹೇಶ್ ಪ್ರಸಾದ್ ರವರು ನೀಡಿದ ಮಾಹಿತಿಯಂತೆ, ಚಾಸಾ-1 ಶ್ರೀ ಪ್ರದೀಪ್ ಟಿ. ಆರ್. ರವರು ಚಾಸಾ-3,ಚಾಸಾ-4 ಮತ್ತು ಚಾಸಾ-14 ರಿಂದ 21 ನೇಯವರ ಜೊತೆ ಮಧ್ಯಾಹ್ನ 3.45 ಗಂಟೆ ಸಮಯಕ್ಕೆ ದಾಳಿ ಮಾಡಿ, 1 ನೇ ಆರೋಪಿಯಾದ ನಿಮ್ಮನ್ನು ಕದ್ರಿ ಮಲ್ಲಿಕಟ್ಟೆ ತೇಜಸ್ವಿನಿ ಆಸ್ಪತ್ರೆಯ ಎದುರುಗಡೆ ರಸ್ತೆ ಬದಿಯಲ್ಲಿ ವಶಕ್ಕೆ ಪಡೆದು, ನಿಮ್ಮಿಂದ 840 LSD ಸ್ಟಾಂಪ್ ಗಳನ್ನು ಮತ್ತು ಮೊಬೈಲ್ ಫೋನುಗಳನ್ನು ಸ್ವಾಧೀನ ಪಡಿಸಿಕೊಂಡಿದ್ದು, 1 ನೇ ಆರೋಪಿಯಾದ ನೀವು ಹಾಗೂ ಈ ಪ್ರಕರಣದಿಂದ ಬೇರ್ಪಡಿಸಿರುವ 2 ನೇ ಆರೋಪಿಯು ಸದರಿ LSD ಮತ್ತು ಗಾಂಜಾವನ್ನು ತಲೆಮರೆಸಿಕೊಂಡಿರುವ 3 ನೇ ಆರೋಪಿಯಿಂದ ಖರೀದಿಸಿದ್ದು, ಯಾವುದೇ ಪರವಾನಿಗೆ ಇಲ್ಲದೇ ಅಕ್ರಮವಾಗಿ ನಿಷೇಧಿತ ಮಾದಕ ವಸ್ತುವಾದ ತಯಾರಿತ LSD ಮತ್ತು ಗಾಂಜಾವನ್ನು ಅಂಚೆ ಮುಖೇನ ಪಾರ್ಸಲ್ ಪಡೆದು ಮಾರಾಟ ಜಾಲ ನಡೆಸುತ್ತಿದ್ದು, ಆ ಪ್ರಕಾರ 1 ನೇ ಆರೋಪಿಯಾದ ನೀವು ಕಲಂ 8(C), 22(C) NDPS Act 1985 r/w 34 ಭಾ ದಂ ಸಂ ರೀತ್ಯಾದಂಡಿಸಲ್ಪಡುವ ಅಪರಾಧವನ್ನು ಮಾಡಿರುತ್ತೀರಿ.

ಮೇಲಿನ ಅಪರಾಧಗಳು ನನ್ನ ಸಂಜ್ಞೆಯಲ್ಲಿ ಬರುವುದರಿಂದ ಈ ಕುರಿತು ನಿಮ್ಮನ್ನು (1 ನೇ ಆರೋಪಿ) ವಿಚಾರಣೆಗೆ ಒಳಪಡಿಸಲು ಆದೇಶಿಸುತ್ತೇನೆ.

ದಿನಾಂಕ 21 ನೇ ದಿವಸ ಜೂನ್ ತಿಂಗಳ 2025 ನೇ ಇಸವಿ.

**(ಬಸವರಾಜ)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ. ಮಂಗಳೂರು.